# ಸಂಗಾರೆಡ್ಡಿ ಅಂಗನವಾಡಿಗಳಲ್ಲಿ ಪೋರ್ಟ್‌ಫೋಲಿಯೋ ಬಳಕೆ

ದಾಸಣ್ಣ ಮಾರೆಡ್ಡಿ ಮತ್ತು ಸುಜಾತಾ ರಾವಿ

ಬುನಾದಿ ಹಂತದ ಕಲಿಕೆಗೆ ಸೂಕ್ತವಾದ ಎರಡು ವಿಶಾಲವಾದ ಮೌಲ್ಯಮಾಪನ ವಿಧಾನಗಳೆಂದರೆ **ಮಗುವನ್ನು ವೀಕ್ಷಿಸುವುದು ಮತ್ತು ಮಗುವು ತನ್ನ ಕಲಿಕೆಯ ಅನುಭವದ ಭಾಗವಾಗಿ ರಚಿಸುವ ಕಲಾಕೃತಿಗಳನ್ನು ವಿಶ್ಲೇಷಿಸುವುದೇ** ಆಗಿದೆ.

ಮಗುವೊಂದರ ಆರಂಭಿಕ ಬಾಲ್ಯದ ಶಿಕ್ಷಣ ಹಂತದ ತರಗತಿಯಲ್ಲಿನ ಕಲಾಕೃತಿ ಎಂದರೆ ಅದು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಮಗುವು ರಚಿಸಿದ ವಸ್ತುವನ್ನು ಸೂಚಿಸುತ್ತದೆ. ಮಗು ಮಾಡಿರುವ ರಚನೆಯನ್ನು ನೋಡುವುದರ ಮೂಲಕ ಮತ್ತು ಒಂದು ನಿರ್ದಿಷ್ಟ ಕಲಿಕೆಯ ಫಲಿತಾಂಶಕ್ಕೆ ಸಂಬಂಧಿಸಿದಂತೆ ಮಗುವಿನ ತಿಳುವಳಿಕೆಯ ಮಟ್ಟವು ಮಗು ಸೃಜಿಸಲು ಸಾಧ್ಯವಾದುದನ್ನು ಹೇಗೆ ಪ್ರಭಾವಿಸಿತು ಎಂಬುದನ್ನು ನೋಡುವುದಕ್ಕೆ ಈ ಕಲಾಕೃತಿಗಳನ್ನು ಬಳಸಬಹುದು. ಈ ಕಲಾಕೃತಿಗಳು ಮಗುವೊಂದರ ಜಾಣ್ಮೆ ಹಾಗೂ ಸಾಮರ್ಥ್ಯಗಳ ಬಗ್ಗೆ ಮಾಹಿತಿಯ ಸಮೃದ್ಧ ಮೂಲವನ್ನು ಒದಗಿಸಿಕೊಡುತ್ತವೆ.

ಪೋರ್ಟ್‌ಫೋಲಿಯೋ ಎಂದರೆ ಅದು ಮಕ್ಕಳ ಬಹು ಮುಖ್ಯವಾದ ಕೆಲಸದ ಮಾದರಿಗಳು ಮತ್ತು ದಾಖಲೆಗಳ ಉದ್ದೇಶಪೂರ್ವಕ ಸಂಗ್ರಹವಾಗಿದೆ. ನಿರ್ದಿಷ್ಟವಾದ ಕಲಿಕಾ ಫಲಗಳಿಗೆ ಸಂಬಂಧಿಸಿದಂತೆ ಮಗುವಿನ ಪ್ರಯತ್ನ ಮತ್ತು ಸಾಧನೆಗಳಿಗೆ ಪುರಾವೆಗಳನ್ನು ಒದಗಿಸುವ ಮೂಲಕ ಅದು ಮೌಲ್ಯಮಾಪನಕ್ಕೆ ಅವಕಾಶ ಮಾಡಿಕೊಡುತ್ತದೆ. ಶಿಕ್ಷಕರು ನಿರ್ದಿಷ್ಟ ಫಲಿತಾಂಶಗಳಿಗೆ ಸಂಬಂಧಿಸಿದಂತೆ ಮಗುವಿನ ಪೋರ್ಟ್‌ಫೋಲಿಯೋವನ್ನು ವಿಶ್ಲೇಷಿಸಬೇಕು ಮತ್ತು ಸಾಧಿಸಬೇಕಾದ ಸಾಮರ್ಥ್ಯಗಳಿಗೆ ಎದುರಾಗಿ ಮಗುವಿನ ಪ್ರಗತಿಯನ್ನು ಗುರುತಿಸಬೇಕು. ಮಗುವಿನ ಪೋರ್ಟ್‌ಫೋಲಿಯೋವನ್ನು ವ್ಯವಸ್ಥೆ ಮಾಡುವಾಗ ಅದು ಮಗುವು ಸಾಧಿಸಬೇಕಾಗಿರುವ ಫಲಿತಾಂಶಗಳನ್ನು ಸ್ಪಷ್ಟವಾಗಿ ಸೂಚಿಸುವಂತೆ ಇರಬೇಕು. ಪ್ರತಿ ಮಗುವು ತಾನು ರಚಿಸಿದ ಕಲಾಕೃತಿಗಳನ್ನು ಸಂಗ್ರಹಿಸಲು ಸಾಧ್ಯವಾಗುವ ರೀತಿಯಲ್ಲಿ ತನಗೆ ಮೀಸಲಾದ ಪ್ರತ್ಯೇಕ ಫೋಲ್ಡರ್‌ಗಳನ್ನು ಹೊಂದಿರಬೇಕು.

**ಮೂಲ: ಬುನಾದಿ ಹಂತ 2020ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, ವಿಭಾಗ 6.2 ವಿಧಾನಗಳು ಮತ್ತು ಮೌಲ್ಯಮಾಪನ ಪರಿಕರಗಳು. ಪುಟ 173, ಪುಟಗಳು 177-17**

ಸಂಗಾರೆಡ್ಡಿಯ ಅಂಗನವಾಡಿಗಳಲ್ಲಿ ಮಗುವಿನ ಕಾರ್ಯ–ಚಟುವಟಿಕೆಗಳು, ಬೆಳವಣಿಗೆಯ ಪರಿಶೀಲನಾ ಪಟ್ಟಿ, ಪೋಷಕರಿಂದ ಪಡೆಯಲಾಗಿರುವ ಮಾಹಿತಿ, ಮಕ್ಕಳ ಕುರಿತ ಶಿಕ್ಷಕರ ನಿರೂಪಣೆ ಮತ್ತು ಅವಲೋಕನಗಳು ಸೇರಿದಂತೆ ಮಗುವಿನ ಸಂಪೂರ್ಣ ಮಾಹಿತಿಯನ್ನು ಒಳಗೊಂಡಿರುವಂತಹ ಪೋರ್ಟ್‌ಫೋಲಿಯೋಗಳನ್ನು ಶಿಕ್ಷಕರು ನಿರ್ವಹಣೆ ಮಾಡುತ್ತಾರೆ.

ಶಿಕ್ಷಕರು ವರ್ಷದ ಆರಂಭದಲ್ಲಿ ಪ್ರತಿ ಮಗುವಿಗಾಗಿ ಪ್ರತ್ಯೇಕವಾದ ಫೋಲ್ಡರ್/ಚೀಲವೊಂದನ್ನು ಸಿದ್ಧಪಡಿಸುತ್ತಾರೆ. ಅದರ ಮೇಲೆ ಮಗುವಿನ ವಿವರಗಳನ್ನು ಬರೆದಿರುವ ಚೀಟಿಯನ್ನು ಅಂಟಿಸುವುದರಿಂದಾಗಿ ಅದನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಮಗುವು ರಚಿಸಿದ ರೇಖಾ ಚಿತ್ರಗಳು, ಕರಕುಶಲ ಕೆಲಸಗಳು, , ಶಿಕ್ಷಕರ ಅವಲೋಕನಗಳು ಹಾಗೂ ನಿರೂಪಣೆಯ ಸಾರಾಂಶ ಮತ್ತು ಮಗುವಿನ ಅಭ್ಯಾಸ ಪುಸ್ತಕ ಇವುಗಳನ್ನು ಕಾಲಾನುಕ್ರಮದಲ್ಲಿ ಇದರೊಳಗೆ ಇರಿಸುತ್ತಾ ಬರಲು ಇದನ್ನು ಬಳಸಲಾಗುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (DWCD) ಯವರು ಒದಗಿಸುವ ಮೌಲ್ಯಮಾಪನದ ಕಾರ್ಡ್ ಅನ್ನು ಪ್ರತಿ ತ್ರೈಮಾಸಿಕದ ಅಂತ್ಯದಲ್ಲಿ ಶಿಕ್ಷಕರು ಈ ಪೋರ್ಟ್‌ಫೋಲಿಯೋದಲ್ಲಿರುವ ಮಾಹಿತಿಯನ್ನು ಆಧರಿಸಿ ಭರ್ತಿ ಮಾಡುತ್ತಾರೆ ಮತ್ತು ಅದನ್ನು ಪೋರ್ಟ್‌ಫೋಲಿಯೋದಲ್ಲಿ ಇರಿಸುತ್ತಾರೆ.

ಮಕ್ಕಳ ಪ್ರಗತಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಅವರಿಗೆ ಅವಕಾಶಗಳನ್ನು ಒದಗಿಸಿಕೊಡಲು ಹಾಗೂ ಮಗುವಿನ ಪ್ರಗತಿಯ ಕುರಿತು ಪೋಷಕರಿಗೆ ವಿವರಿಸುವಲ್ಲಿ ಶಿಕ್ಷಕರ ಪೋರ್ಟ್‌ಫೋಲಿಯೋ ಬಳಕೆಯ ಎರಡು ಪ್ರಕರಣ ಅಧ್ಯಯನಗಳನ್ನು ನಾವು ಈ ಲೇಖನದಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ.

## ಪ್ರಕರಣ ಅಧ್ಯಯನ 1: ಪೋರ್ಟ್‌ಫೋಲಿಯೋಗಳನ್ನು ಸಿದ್ಧಪಡಿಸುವುದು ಮತ್ತು ನಿರ್ವಹಣೆ ಮಾಡುವುದು

ಮಲ್ಲೇಶ್ವರಿ, ಅಂಗನವಾಡಿ ಶಿಕ್ಷಕಿ, ನಗಸಾನ್ಪಲ್ಲಿ, ಸದಾಶಿವಪೇಟ್ ಯೋಜನೆ, ಸಂಗಾರೆಡ್ಡಿ ಜಿಲ್ಲೆ, ತೆಲಂಗಾಣ.

ಮಲ್ಲೇಶ್ವರಿ ಅವರು 2002ರಲ್ಲಿ ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯ ಸದಾಶಿವ ಪೇಟ್ ಬ್ಲಾಕ್ನ ಗ್ರಾಮವೊಂದರಲ್ಲಿ ಅಂಗನವಾಡಿ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿದರು. ಆಕೆ ಹತ್ತನೆಯ ತರಗತಿವರೆಗೆ ಶಿಕ್ಷಣ ಪಡೆದಿದ್ದಾರೆ. ಪ್ರಸ್ತುತ 3 ರಿಂದ 6 ವರ್ಷದೊಳಗಿನ 13 ಮಕ್ಕಳು ಆಕೆಯ ಅಂಗನವಾಡಿಗೆ ಹಾಜರಾಗುತ್ತಾರೆ.

ಆದರೆ ಅವರು ಪೋರ್ಟ್ಫೋಲಿಯೋ ನಿರ್ವಹಣೆಯನ್ನು ಪ್ರಾರಂಭ ಮಾಡಿದ್ದು ಮಾತ್ರ 2015ರಿಂದ ಈಚೆಗೆ. ಆರಂಭದಲ್ಲಿ ಪೋರ್ಟ್ಫೋಲಿಯೋಗಳನ್ನು ಆಕೆ ತರಗತಿಯ ಪ್ರದರ್ಶನದ ಭಾಗವಾಗಿ ಬಳಸಿದರು. ಅದಕ್ಕಾಗಿ ಅವರು ಆಯಾ ಮಗುವಿನ ಹೆಸರು ಹಾಗೂ ಮೂಲ ಮಾಹಿತಿಗಳೊಂದಿಗೆ (ಜನ್ಮ ದಿನಾಂಕ, ಲಿಂಗ, ಪೋಷಕರ ಹೆಸರುಗಳು ಮತ್ತು ಸಂಪರ್ಕ ಸಂಖ್ಯೆ) ಇವುಗಳ ಚೀಟಿಯನ್ನು ಅಂಟಿಸಿದ ಪುಟ್ಟ ಚೀಲಗಳನ್ನು ಕ್ರಮವಾಗಿ ಜೋಡಿಸಿಟ್ಟರು. ಕಾಲಕ್ರಮೇಣ, ಈ ಚೀಲಗಳಲ್ಲಿ ಏನೇನೆಲ್ಲ ಇರಿಸಬೇಕು, ಹೀಗೆ ಇರಿಸಿದವುಗಳನ್ನು ಮಕ್ಕಳ ಬೆಳವಣಿಗೆಯ ದಾಖಲೆಯ ವಿಷಯಗಳಾಗಿ ಹೇಗೆ ಬಳಸಬಹುದು ಎಂಬುದನ್ನು ಶಿಕ್ಷಕಿಯರ ಸಾಮರ್ಥ್ಯಾಭಿವೃದ್ಧಿ ಕಾರ್ಯಾಗಾರಗಳ ಮೂಲಕ, ಸಹವರ್ತಿಗಳಿಂದ ಹಾಗೂ ತಮ್ಮ ವೈಯಕ್ತಿಕ ಅನುಭವಗಳಿಂದ ಕಲಿತರು. ಮಕ್ಕಳ ಬೆಳವಣಿಗೆಯನ್ನು ನಿರ್ಣಯಿಸುವಲ್ಲಿ ಪೋರ್ಟ್ಫೋಲಿಯೋಗಳಿಂದಾಗುವ ಪ್ರಯೋಜನವನ್ನು ಮತ್ತು ಅದರ ಮಹತ್ತ್ವವನ್ನೂ ಕ್ರಮೇಣ ಅವರು ಅರ್ಥಮಾಡಿಕೊಳ್ಳತೊಡಗಿದರು.

ಅವರು ಮಕ್ಕಳ ಕಲಾಕೃತಿಗಳನ್ನು ಮತ್ತು ಅಭ್ಯಾಸ ಪುಸ್ತಕಗಳನ್ನು ಪೋರ್ಟ್ಫೋಲಿಯೋದಲ್ಲಿ ಜೋಡಿಸಿಡಲು ಪ್ರಾರಂಭಿಸಿದರು. ಆಕೆಯ ಮೇಲ್ವಿಚಾರಕರು ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಮಕ್ಕಳು ತಮ್ಮ ಕಾರ್ಯಚಟುವಟಿಕೆಗಳನ್ನು ಮಾಡಿ ಮುಗಿಸಿದ ಕೂಡಲೆ ಅದರಲ್ಲಿ ದಿನಾಂಕವನ್ನು ನಮೂದಿಸುವಂತೆ ಸೂಚಿಸಿದ್ದನ್ನು ಆಕೆ ಅನುಸರಿಸಲು ಪ್ರಾರಂಭಿಸಿದರು. ಪೋಷಕ–ಶಿಕ್ಷಕರ ಸಭೆಗಳಲ್ಲಿ ಮಕ್ಕಳ ಕಾರ್ಯಚಟುವಟಿಕೆಗಳಲ್ಲಿ ಆಗಿರುವ ಪ್ರಗತಿಯನ್ನು ಪೋಷಕರೊಂದಿಗೆ ಹಂಚಿಕೊಳ್ಳಲು ಇದು ಆಕೆಗೆ ನೆರವಾಯಿತು. ಆಕೆ ಮುಂದೆ ಎದುರಿಸಿದ ಸವಾಲು ಏನೆಂದರೆ, ಪೋಷಕರು ತಮ್ಮ ಮಗು ಮಾಡಿದ ನಿರ್ದಿಷ್ಟ ಕೆಲಸದ ಬಗ್ಗೆ ಕೇಳಿದಾಗ, ಆಕೆಗೆ ಎಲ್ಲಾ ವಿವರಗಳನ್ನು ನೆನಪಿಗೆ ತಂದುಕೊಳ್ಳಲು ಸಾಧ್ಯವಾಗಲಿಲ್ಲ. ಆದ್ದರಿಂದ, ಆಕೆ ದಿನಾಂಕದ ಜೊತೆಗೆ ಪ್ರತಿಯೊಂದು ಕಾರ್ಯಚಟುವಟಿಕೆಗೆ ಸಂಬಂಧಿಸಿದ ಸಂಕ್ಷಿಪ್ತ ವಿವರಣೆಯನ್ನು ಸೇರಿಸಲು ಪ್ರಾರಂಭಿಸಿದರು. ನಂತರದ ಸಭೆಗಳಲ್ಲಿ ಅವರು ಮಗು ಮಾಡಿರುವ ಕಾರ್ಯವೈಖರಿಯನ್ನು ಪೋಷಕರಿಗೆ ವಿವರಿಸಲು ಸಾಧ್ಯವಾಯಿತು. ಪೋಷಕರು ಕ್ರಮೇಣ ತಮ್ಮ ಮಗುವಿನಲ್ಲಾಗುತ್ತಿರುವ ಬೆಳವಣಿಗೆಯನ್ನು ನೋಡಿ ಬಹಳ ಸಂತೋಷಪಟ್ಟರು.

ಪೋರ್ಟ್ಫೋಲಿಯೋಗಳನ್ನು ನಿರ್ವಹಿಸುತ್ತಿರುವುದರಿಂದಾಗಿ ಅದನ್ನು ಬಳಸಿ ಹೆಚ್ಚಿನ ಕಲಿಕೆಯ ಅಗತ್ಯವಿರುವುದನ್ನು ಗುರುತಿಸಿ ಅಂತಹ ಕಲಿಕಾ ಅವಕಾಶಗಳನ್ನು ಮಕ್ಕಳಿಗಾಗಿ ಯೋಜಿಸಲು ಮತ್ತು ಒದಗಿಸಿಕೊಡಲು ಆಕೆಗೆ ಸಹಾಯವಾಯಿತು. ಮಕ್ಕಳ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಇರುವ ಒಂದೇ ದಾರಿಯೆಂದರೆ ಅದು ಮಗುವನ್ನು ವೀಕ್ಷಣೆ ಮಾಡುವುದರ ಮೂಲಕವೇ ಆಗಿದೆ ಎಂದು ಇದುವರೆಗೆ ಭಾವಿಸಿಕೊಂಡಿದ್ದ ಆಕೆ ಪ್ರತಿ ಮಗುವಿನ ಕೆಲಸದ ಕುರಿತು ಪೋರ್ಟ್ಫೋಲಿಯೋವನ್ನು ಇರಿಸಿಕೊಳ್ಳುವ ಮೂಲಕ ಅವರ ಮೌಲ್ಯಮಾಪನದ ಕಾರ್ಡ್‌ಗಳನ್ನು ಹೆಚ್ಚು ನಿಖರವಾಗಿ ತುಂಬಲು ಸಾಧ್ಯವಾಗುತ್ತದೆ ಎಂಬುದನ್ನು ಆಕೆ ಅರಿತುಕೊಂಡರು.

ಇದರಿಂದಾಗಿ ಪ್ರತಿ ಮಗುವಿನ ಅಗತ್ಯಗಳೇನು ಎಂಬುದನ್ನು ತಿಳಿದು ಗಮನವಹಿಸಲು ಮತ್ತು ಆಯಾ ಮಗುವಿನ ದೈನಂದಿನ ಚಟುವಟಿಕೆಗಳಲ್ಲಿ ಮಗುವಿಗೆ ನೆರವಾಗಲು ಕೂಡ ಇದರಿಂದ ಸಹಾಯವಾಯಿತು. ಇದರ ಜೊತೆಗೆ ಸೇರಿಸಬಹುದಾದ ಮತ್ತೊಂದು ಅಂಶವೆಂದರೆ, ತಮ್ಮ ಚೀಲಗಳು ಮತ್ತು ತಮ್ಮ ಕಾರ್ಯಚಟುವಟಿಕೆಗಳನ್ನು ತಾವೇ ನೋಡಿಕೊಳ್ಳಲು ಮಕ್ಕಳಿಗೆ ಇದು ಅವಕಾಶಮಾಡಿಕೊಟ್ಟಿತು. ಇದು ಮಕ್ಕಳಿಗೆ ರೋಮಾಂಚನ ಉಂಟುಮಾಡಿದ್ದಲ್ಲದೆ ಅವರು ತಾವು ಮಾಡಿರುವ ಕಾರ್ಯಚಟುವಟಿಕೆಗಳ ವಿವಿಧ ಅಂಶಗಳ ಕುರಿತು ಮಾತನಾಡಲು ಮತ್ತು ವಿವರಿಸಲು ಇದು ಪ್ರೋತ್ಸಾಹಿಸಿತು. ಮಲ್ಲೇಶ್ವರಿ ಅವರು ಮಕ್ಕಳಿಗೆ ಪರಸ್ಪರರ ಕೆಲಸವನ್ನು ನೋಡುವಂತೆ ಮತ್ತು ಅವುಗಳ ಕುರಿತು ಮಾತನಾಡು–ವಂತೆಯೂ ಪ್ರೋತ್ಸಾಹಿಸುತ್ತಿದ್ದರು. ಇದು ಮಕ್ಕಳಲ್ಲಿ ಸಾಮಾಜಿಕ ಸಂವಹನದ ಕೌಶಲವನ್ನು ಮಾತ್ರವಲ್ಲದೆ ಇತರರ ಕೆಲಸವನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸುವ ಗುಣವನ್ನು ಬೆಳೆಸುವುದಕ್ಕೂ ಸಹಾಯಕವಾಯಿತು.

ವರ್ಷದ ಕೊನೆಯಲ್ಲಿ ಮಕ್ಕಳು ಪ್ರಾಥಮಿಕ ಶಾಲೆಗೆ ತೆರಳಲು ಸಿದ್ಧರಾಗುವಾಗ ಈ ಮಕ್ಕಳ ಪೋರ್ಟ್ಫೋಲಿಯೋಗಳನ್ನು ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕರೊಂದಿಗೆ ಮಲ್ಲೇಶ್ವರಿಯವರು ಹಂಚಿಕೊಳ್ಳುತ್ತಾರೆ. ಖಾಸಗಿ ಶಾಲೆಗೆ ಸೇರುವವರ ಪೋರ್ಟ್ಫೋಲಿಯೋಗಳನ್ನು ಅಲ್ಲಿನ ಹೊಸ ಶಿಕ್ಷಕರೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗುವಂತೆ ಅವರ ಪೋಷಕರಿಗೆ ನೀಡಲಾಗುತ್ತದೆ. ಇದು ಈ ಶಿಕ್ಷಕರಿಗೆ ಮಕ್ಕಳ ಪ್ರಗತಿಯನ್ನು ಅರ್ಥಮಾಡಿಕೊಳ್ಳಲು ಮುಂದಿನ ಶೈಕ್ಷಣಿಕ ವರ್ಷಕ್ಕೆ ಮೂಲಾಧಾರವಾಗಿ ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

## ಪ್ರಕರಣ ಅಧ್ಯಯನ 2: ಕಲಾಕೃತಿಗಳ ವಿಶ್ಲೇಷಣೆ

ಜೆ ಇಂದಿರಾ, ಅಂಗನವಾಡಿ ಶಿಕ್ಷಕಿ, ಲಿಂಗಾಪುರ, ನಾರಾಯಣ ಖೇಡ್ ಯೋಜನೆ, ಸಂಗಾರೆಡ್ಡಿ ಜಿಲ್ಲೆ, ತೆಲಂಗಾಣ

ಇಂದಿರಾ ಅವರು ಪೂರ್ವ ಪ್ರಾಥಮಿಕ ತರಗತಿಗಳನ್ನು ಸಕ್ರಿಯವಾಗಿ ನಡೆಸುತ್ತಿದ್ದು, 2018ರಿಂದ ಅವರು ಮಕ್ಕಳು

ಬೆಳವಣಿಗೆ ಹೊಂದಲು ಸೂಕ್ತವಾದ ಅವಕಾಶಗಳನ್ನು ಒದಗಿಸಿಕೊಡುವ ಮೂಲಕ ಅವರ ಸಮಗ್ರ ಬೆಳವಣಿಗೆಗಾಗಿ ಶ್ರಮಿಸುತ್ತಿದ್ದಾರೆ. ಹೆಚ್ಚುವರಿಯಾಗಿ, ಕಳೆದ ಮೂರು ವರ್ಷಗಳಿಂದ ಅವರು ಮಕ್ಕಳ ಬೆಳವಣಿಗೆಯನ್ನು ಉತ್ತಮ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದಕ್ಕಾಗಿ ಮಕ್ಕಳ ಪೋರ್ಟ್ಫೋಲಿ-ಯೋಗಳನ್ನು ಹಾಗೂ ಮಕ್ಕಳನ್ನು ವೀಕ್ಷಣೆ ಮಾಡಿ ಕಂಡುಕೊಂಡ ಅಂಶಗಳ ಉಚಿತ ದಾಖಲೆಗಳ ನಿರ್ವಹಣೆಯನ್ನು ಮಾಡುತ್ತಿದ್ದಾರೆ.

ಅಂಗನವಾಡಿ ಶಿಕ್ಷಕರಿಗಾಗಿ ನಡೆಸಲಾದ ಸಾಮರ್ಥ್ಯಾಭಿವೃದ್ಧಿ ಕಾರ್ಯಾಗಾರವೊಂದರಲ್ಲಿ ಅವರು ತಮ್ಮೊಂದಿಗೆ ತಂದಿದ್ದ ಮಗುವಿನ ಪೋರ್ಟ್ಫೋಲಿಯೋ ಚೀಲವನ್ನು ಇತರ ಶಿಕ್ಷಕರಿಗೆ ತೋರಿಸಿ ಅದನ್ನು ಅವರು ಹೇಗೆ ಬಳಕೆ ಮಾಡುತ್ತಿದ್ದಾರೆ ಎಂದು ವಿವರಿಸಿದರು. ಆ ಅವಧಿಯಲ್ಲಿ ಅವರು ಚಿತ್ರಕ್ಕೆ ( ಕೊಟ್ಟಿರುವ ಜಾಗಗಳಲ್ಲಿ) ಬಣ್ಣ ತುಂಬುವ ಮಾದರಿಯನ್ನು ಆಯ್ದುಕೊಂಡರು ಮತ್ತು ಬಣ್ಣ ತುಂಬುವ ನಿರಂತರ ಅಭ್ಯಾಸದಿಂದಾಗಿ ಮಗುವಿನಲ್ಲಿ ಸಣ್ಣ ಸ್ನಾಯುಗಳ ಸರಾಗ ಚಲನೆಯ ನಿಖರತೆ ಮತ್ತು ನಿಯಂತ್ರಣ ಕೆಲವು ತಿಂಗಳುಗಳ ಅವಧಿಯಲ್ಲಿ ಹೇಗೆ ಸುಧಾರಿಸಿತು ಎಂಬುದನ್ನು ವಿವರಿಸಿದರು. ಮಗುವು ಸೆಪ್ಟೆಂಬರ್ 2022ರಲ್ಲಿ ಒಂದು ಚೆಂಡಿನ ಚಿತ್ರದ ಬಾಹ್ಯ ರೇಖೆಯ ಒಳಭಾಗದಲ್ಲಿ ಬಣ್ಣ ತುಂಬಿರುವ ರೇಖಾಚಿತ್ರ ಮತ್ತು ಅಕ್ಟೋಬರ್ 2023ರಲ್ಲಿ ಅದೇ ಮಗು ಹೂವು ಮತ್ತು ಎಲೆಗೆ ಬಣ್ಣ ಹಚ್ಚಿರುವ ಚಿತ್ರದ ಮಾದರಿಯೊಂದಿಗೆ ಹೋಲಿಸಿ ನೋಡಿದಾಗ, ಬಣ್ಣ ಹಚ್ಚುವ ಕೌಶಲದಲ್ಲಿ ಮಗುವಿನಲ್ಲಿ ಆಗಿರುವ ಸುಧಾರಣೆಯನ್ನು ಗಮನಿಸಬಹುದಾಗಿದೆ. (ಚಿತ್ರ 1 ಮತ್ತು 2).






**ಚಿತ್ರಗಳು 1 ಮತ್ತು 2. ಮಗುವಿನ ಬಣ್ಣ ತುಂಬುವ ಕೌಶಲದಲ್ಲಿ ಆಗಿರುವ ಸುಧಾರಣೆ ಸ್ಪಷ್ಟವಾಗಿ ಕಂಡುಬರುತ್ತಿದೆ.**

ಪೋಷಕ–ಶಿಕ್ಷಕ ಸಭೆಯೊಂದರಲ್ಲಿ (ಅದು ಅಂಗನವಾಡಿಯ ಸಂದರ್ಭದಲ್ಲಿನ ECCE ದಿನ), ಮಗುವನ್ನು ಅಂಗನವಾಡಿಯಿಂದ ಬಿಡಿಸಿ ಪೂರ್ವ ಪ್ರಾಥಮಿಕ ಖಾಸಗಿ ಶಾಲೆಗೆ ದಾಖಲಿಸಿದ ಪೋಷಕರಿಗೆ ತಮ್ಮ ಮಗುವಿನ ಪೋರ್ಟ್ಫೋಲಿಯೋವನ್ನು ಇಂದಿರಾ ಅವರು ತೋರಿಸಿದರು, ಮತ್ತು ಮಗು ಮಾಡಿರುವ ಕಾರ್ಯಚಟುವಟಿಕೆಗಳು ಮತ್ತು ಮಗುವಿನ ಪ್ರಗತಿಯ ಕುರಿತಂತೆ ಅವರದನ್ನು ಯಾವ ರೀತಿಯಲ್ಲಿ ನಿರ್ವಹಣೆ ಮಾಡಿದ್ದರು ಎಂಬುದನ್ನು ವಿವರಿಸಿದರು. ಇದರಿಂದ ಪೋಷಕರು ಬಹಳ ಸಂತೋಷಪಟ್ಟರು ಮತ್ತು ತಮ್ಮ ಮಗುವನ್ನು ಮತ್ತೆ ಅಂಗನವಾಡಿಗೆ ಕಳುಹಿಸಲು ಪ್ರಾರಂಭ ಮಾಡಿದರು. ಆ ಮಗು ಈಗ ಅಂಗನವಾಡಿಗೆ ಹಾಜರಾಗುತ್ತಿದೆ.

## ಉಪಸಂಹಾರ

ಮಗುವಿನ ಪ್ರಗತಿಯ ದಾಖಲೆಯಾಗಿ ಪೋರ್ಟ್ಫೋಲಿಯೋದ ಮಹತ್ತ್ವವನ್ನು ಈಗ ಸಂಗಾರೆಡ್ಡಿಯ ಅನೇಕ ಅಂಗನವಾಡಿ ಶಿಕ್ಷಕಿಯರು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದಾರೆ. ಅವರು ಮಕ್ಕಳ ಬೆಳವಣಿಗೆಯ ಪ್ರಗತಿಯನ್ನು ಅರ್ಥಮಾಡಿಕೊಳ್ಳಲು ಪೋರ್ಟ್ಫೋಲಿಯೋಗಳನ್ನು ಪರಿಣಾಮಕಾರಿಯಾಗಿ ನಿರ್ವಹಿ–ಸುತ್ತಿದ್ದಾರೆ ಮತ್ತು ಬಳಸುತ್ತಿದ್ದಾರೆ.

ಇದು, ಪೋಷಕರು ಮತ್ತು ಸಮುದಾಯ ಅಂಗನವಾಡಿಗಳನ್ನು ನೋಡುವ ದೃಷ್ಟಿಕೋನದಲ್ಲಿ, ಅಂಗನವಾಡಿಗಳು ಕೇವಲ ಆಹಾರ ಉಣಿಸುವ ಕೇಂದ್ರಗಳಾಗಿರದೆ ಅದು ಕಲಿಕಾ ಕೇಂದ್ರವಾಗುವಲ್ಲಿ ಧನಾತ್ಮಕ ಬದಲಾವಣೆಗೆ ಕಾರಣವಾಗಿದೆ. ಪರಿಣಾಮವಾಗಿ ಪೋಷಕರು ತಮ್ಮ ಮಕ್ಕಳನ್ನು ನಿಯಮಿತವಾಗಿ ಅಂಗನವಾಡಿಗಳಿಗೆ ಕಳುಹಿಸುತ್ತಾರೆ ಮತ್ತು ಮನೆಯಲ್ಲಿ ಅವರೊಂದಿಗೆ ಹೆಚ್ಚು ಸಮಯ ಕಳೆಯುತ್ತಾರೆ, ಅವರು ಹೇಳುವುದನ್ನು ಕೇಳಿಸಿಕೊಳ್ಳುತ್ತಾರೆ. ಆಟವಾಡುತ್ತಾರೆ ಮತ್ತು ಕತೆಗಳನ್ನು ಹೇಳುತ್ತಾರೆ. ಸಮುದಾಯವು ಅಂಗನವಾಡಿಗೆ ವಿವಿಧ ರೀತಿಯಲ್ಲಿ ಒತ್ತಾಸೆಯಾಗಿರುತ್ತದೆ. ಆಟಿಕೆಗಳು, ಬೋಧನಾ–ಕಲಿಕಾ ಸಾಮಗ್ರಿಗಳನ್ನು ಒದಗಿಸುವುದರಿಂದ ಹಿಡಿದು ಕೇಂದ್ರವನ್ನು ನಡೆಸಲು ಬಾಡಿಗೆ ರಹಿತ ಸ್ಥಳಾವಕಾಶವನ್ನು ಒದಗಿಸುವುದು ಅಥವಾ ಮಕ್ಕಳ ಬಳಕೆಗೆ ಅನುವಾಗುವಂತೆ ಕೇಂದ್ರದ ಸುತ್ತಲಿನ ಪರಿಸರವನ್ನು ತೆರವುಗೊಳಿಸಲು, ಸ್ವಚ್ಛಗೊಳಿಸಲು ಮತ್ತು ಸಮತಟ್ಟುಗೊಳಿಸಲು ಸಹಾಯ ಮಾಡುತ್ತದೆ.




**ದಾಸಣ್ಣ ಮಾರೆಡ್ಡಿ** ಅವರು ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯ ನಾರಾಯಣಖೇಡ್ ಬ್ಲಾಕ್‌ನಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಕ್ಷೇತ್ರ ಕಾರ್ಯದ ಸಂಯೋಜಕರಾಗಿದ್ದಾರೆ. ಆರಂಭಿಕ ಬಾಲ್ಯದ ಶಿಕ್ಷಣದ ವಿವಿಧ ಭಾಗೀದಾರರಿಗೆ ಕಲಿಕೆಯ ಅನುಭವಗಳನ್ನು ನೀಡುವ ಕಾರ್ಯವನ್ನು ಸುಗಮಗೊಳಿಸುವುದು ಮತ್ತು ಮಕ್ಕಳೊಂದಿಗೆ ಕೆಲಸ ಮಾಡುವುದು ಅವರ ಇಷ್ಟದ ವಿಷಯಗಳಾಗಿವೆ. ಇಂಜಿನಿಯರಿಂಗ್ ಪದವೀಧರರಾಗಿರುವ ಅವರು 10 ವರ್ಷಗಳ ಹಿಂದೆ ಶಿಕ್ಷಣ ಕ್ಷೇತ್ರದೊಂದಿಗೆ ಕೆಲಸ ಮಾಡಲು ಬರುವುದಕ್ಕೆ ಮುನ್ನ ಇನ್‌ಫೋಸಿಸ್‌ನಲ್ಲಿ 2 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಅವರನ್ನು Dasanna.mareddy@azimpremjifoundation.org ಮೂಲಕ ಸಂಪರ್ಕಿಸಬಹುದು.



**ಸುಜಾತಾ ರಾವಿ** ಅವರು ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಬ್ಲಾಕ್ ಸಂಯೋಜಕಿಯಾಗಿದ್ದಾರೆ. ಇತರ ರಾಜ್ಯಗಳಲ್ಲಿ ಫೌಂಡೇಷನ್ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿಗಳೊಂದಿಗೆ ಕಾರ್ಯಕರ್ತೆಯರ ಸಾಮರ್ಥ್ಯಾಭಿವೃದ್ಧಿ, ಮಕ್ಕಳ ಮೌಲ್ಯಮಾಪನ ಮತ್ತು ಆರಂಭಿಕ ಬಾಲ್ಯದ ಶಿಕ್ಷಣ (ECE) ವಿಸ್ತರಣೆಗಾಗಿ ಪಠ್ಯಕ್ರಮ ಮತ್ತು ಅಭ್ಯಾಸದ ಸರಣಿ (ಕೋರ್ಸ್)ಯನ್ನು ಅಭಿವೃದ್ಧಿಪಡಿಸುತ್ತಿರುವ ತಂಡದಲ್ಲಿ ಒಬ್ಬರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರನ್ನು raavi.sujatha@azimpremjifoundation.org ಮೂಲಕ ಸಂಪರ್ಕಿಸಬಹುದು.



ಅನುವಾದ: **ಉಷಾ ಆಂಬ್ರೋಸ್** | ಪರಿಶೀಲನೆ: **ಲತಾ ಕೆ. ಸಿ.**